## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **448**
ಸದಸ್ಯರ ಹೆಸರು : ಶ್ರೀ ಪಿ.ಹೆಚ್.ಪೂಜಾರ್
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 07.12.2023

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರದ ಕಾರ್ಯಕ್ರಮಗಳ ಜಾಹೀರಾತುಗಳನ್ನು ಏಜನ್ಸಿ (ಮಧ್ಯವರ್ತಿಗಳ) ಮೂಲಕ 15% ಕಮಿಷನ್ ನೀಡಿ ಪತ್ರಿಕೆಯವರಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದಿಂದ 15% ಕಮಿಷನ್ ಶುಲ್ಕವನ್ನು ಜಾಹೀರಾತು ಏಜೆನ್ಸಿಗಳಿಗೆ ನೀಡುವುದಿಲ್ಲ. ಆದರೆ ಸರ್ಕಾರದಿಂದ ಜಾಹೀರಾತು ಶುಲ್ಕ ಪಡೆಯುವ ಪತ್ರಿಕೆಗಳು ತಮಗೆ ದೊರೆಯುವ ಮೊತ್ತದಿಂದ ಈ ಕಮಿಷನ್ ಮೊತ್ತವನ್ನು ಭರಿಸುತ್ತಾರೆ. |
| (ಆ) | ಇದರಿಂದಾಗಿ ಪತ್ರಿಕೆಯವರಿಗೆ ವರ್ಷಗಳಾದರೂ ಹಣ ಸಂದಾಯವಾಗದೇ ಪತ್ರಿಕೆಯವರು ನಿರಂತರವಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೆಲವೊಂದು ಜಾಹೀರಾತು ಸಂಸ್ಥೆಗಳು ಪತ್ರಿಕೆಗಳಿಗೆ ಜಾಹೀರಾತು ವೆಚ್ಚವನ್ನು ಪಾವತಿಸಲು ವಿಳಂಬವಾಗಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು, ಅಂತಹ ಜಾಹೀರಾತು ಸಂಸ್ಥೆಗಳಿಗೆ ಇಲಾಖೆಯಿಂದ ನೋಟಿಸ್ ಜಾರಿ ಮಾಡಿ ಪತ್ರಿಕೆಗಳಿಗೆ ಜಾಹೀರಾತು ವೆಚ್ಚವನ್ನು ಪಾವತಿಸಲು ಹಾಗೂ ಜಾಹೀರಾತು ವೆಚ್ಚವನ್ನು ಪಾವತಿಸದಿದ್ದಲ್ಲಿ ಅಂತಹ ಜಾಹೀರಾತು ಸಂಸ್ಥೆಗಳನ್ನು ಇಲಾಖೆಯ ನೋಂದಾಯಿತ ಆಯ್ಕೆ ಪಟ್ಟಿಯಿಂದ ಕೈಬಿಡಲಾಗುವುದು ಎಂದು ಎಚ್ಚರಿಸಲಾಗಿದೆ.<br>INS ನಿಯಮಾವಳಿಯನ್ವಯ ಜಾಹೀರಾತು ಸಂಸ್ಥೆಗಳು ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಗುವ ಜಾಹೀರಾತು ವೆಚ್ಚವನ್ನು ಗರಿಷ್ಠ 60 ದಿವಸಗಳ ಒಳಗಾಗಿ ಪಾವತಿಸಬೇಕಾಗಿದ್ದು, ನಿಗದಿತ ಅವಧಿಯಲ್ಲಿ ಜಾಹೀರಾತು ವೆಚ್ಚವನ್ನು ಜಾಹೀರಾತು ಸಂಸ್ಥೆಗಳು ಪತ್ರಿಕೆಗಳಿಗೆ ಪಾವತಿಸದಿದ್ದಲ್ಲಿ INS ಮಾನ್ಯತೆ ರದ್ದುಗೊಳ್ಳುತ್ತದೆ. |
| (ಇ) | ಹಾಗಿದ್ದಲ್ಲಿ, ನೇರವಾಗಿ ವಾರ್ತಾ ಇಲಾಖೆಯ ಮೂಲಕ ಜಾಹೀರಾತು ನೀಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ಶೇ.15% ಹೆಚ್ಚುವರಿ ಹೊಣೆಯನ್ನು ತಪ್ಪಿಸುವುದರ ಜೊತೆಗೆ ಪತ್ರಿಕೆಯವರಿಗೆ ಆಗುವ ವಿಳಂಬ/ತೊಂದರೆ ತಪ್ಪಿಸಲು ಕ್ರಮವಹಿಸಲಾಗುವುದೇ? | ಪ್ರಸ್ತುತ ಹೊಸದಾಗಿ ಜಾಹೀರಾತು ನೀತಿಯನ್ನು ತರುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದ್ದು, ಈ ಜಾಹೀರಾತು ನೀತಿಯನ್ನು ಹೊರಡಿಸುವ ಸಂದರ್ಭದಲ್ಲಿ ಪತ್ರಿಕೆಗಳಿಗೆ ಜಾಹೀರಾತು ಶುಲ್ಕ ಪಾವತಿ ವಿಳಂಬ/ತೊಂದರೆ ತಪ್ಪಿಸುವ ವಿಷಯವನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು. |

**ಕೆಸಿಐ/240/ಪಿಐಪಿ/2023**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**